ಸಾಧ್ಯವಿರಲಿಲ್ಲ.

ನಾನು ಹೇಳಿದೆ:

'ಅವನನ್ನು ನೋಡಲು ನಾಲ್ಕು ಜನ ಹೆಚ್ಚಾಗಿ ಬಂದರೆ 'ಪೋಟ್ಟಿ'ಗೆ ವ್ಯಾಪಾರವು ಜಾಸ್ತಿಯಾಗುತ್ತಲ್ಲವೇ? ಮತ್ತೆ ಅವನೇಕೆ ಹೀಗೆ?...'

'ಸಾರ್, ಅದು ನನ್ನ ನಿಮ್ಮ ನಂಬಿಕೆ. ಆದರೆ ಅವನ ನಂಬಿಕೆ ಹಾಗಿಲ್ಲವಲ್ಲಾ...'

ನನಗೂ ಕಷ್ಟವೆನಿಸಿತು.

'ಒಬ್ಬ ಬಡ ಹುಡುಗನು ಹೇಗಾದರೂ ಮೇಲೆ ಬಂದರೆ ಎಲ್ಲರೂ ಹೀಗೇಕೆ ಆಡುತ್ತಾರೆ?'

ಹೀಗೆ ಕೆಲ ದಿನಗಳ ನಂತರ ಆ ದಾರಿಯಲ್ಲಿ ಹೋಗುವಾಗ ನಾನು 'ಪೋಟ್ಟಿ'ಯ ರೆಸ್ಟೊರೆಂಟ್‌ಗೆ ಹೋದೆ. ಟೀ ಕುಡಿಯಲು ಎನ್ನುವುದಕ್ಕಿಂತ ನನಗೆ ಮುಖ್ಯವಾದ ಉದ್ದೇಶ ಒಂದಿತ್ತು. ಕುಮಾರನನ್ನು ನೋಡಬೇಕು. ಅವನ ಸಮಸ್ಯೆಗಳೇನೆಂಬುದನ್ನು ತಿಳಿದುಕೊಳ್ಳಬೇಕು...

ಆದರೆ ಅಲ್ಲಿ ಕುಮಾರನು ಇರಲೇ ಇಲ್ಲ. ಅಣ್ಣಾಚ್ಚಿಯನ್ನು ಇದರ ಬಗ್ಗೆ ಕೇಳಿದಾಗ ಅವನೆಂದನು,

'ತುಂಬಾ ಅನ್ಯಾಯವಾಯಿತು ಸಾರ್. ಆ ಕಪಟಿ 'ಪೋಟ್ಟಿ' ಅವನನ್ನು ಕೆಲಸದಿಂದ ತೆಗೆದು ಹಾಕಿಬಿಟ್ಟ. ಈಗ ಅವನ ಸ್ಥಿತಿ ಏನು ಗೊತ್ತೆ? ಅವನನ್ನು ಯಾರೂ ಕೆಲಸಕ್ಕೆ ಇಟ್ಟುಕೊಳ್ಳುತ್ತಿಲ್ಲ. ಅವನು ಎಷ್ಟೋ ಕಡೆ ಹೋಗಿ ನೋಡಿದನು. ಆದರೂ ಸಿನಿಮಾದಲ್ಲಿ ನಟಿಸಿದ ಅವನು ಯಾರಿಗೂ ಬೇಡ. ಹಾಗೆಂದು ಅವರು ಬಾಯಿ ಬಿಟ್ಟು ಹೇಳುತ್ತಿಲ್ಲವಾದರೂ ಅದರ ಅರ್ಥ ಅದೇ. ಪಾಪ! ಅವನಿಗೆ ಹೋಟೆಲ್‌ಗಳಲ್ಲೂ ಕೆಲಸ ಇಲ್ಲ, ಸಿನಿಮಾದಲ್ಲೂ ಇಲ್ಲ.'

ನಾನು ಒಬ್ಬ ಪೆದ್ದನಂತೆ ಅವನು ಹೇಳುವುದನ್ನು ಕೇಳುತ್ತಾ ನಿಂತೆನಷ್ಟೆ.

ಇಷ್ಟು ಬೇಗ ಹೀಗೆ ನಡೆಯುತ್ತದೆಂದು ನಾನು ಅಂದುಕೊಂಡಿರಲಿಲ್ಲ. ನನ್ನ ಬಾಯಿಂದ ಮಾತೇ ಹೊರಡಲಿಲ್ಲ.

ಅಣ್ಣಾಚ್ಚಿ ಮತ್ತೆ ಹೇಳಿದನು,

'ಸಾರ್ ಅವನು ಒಬ್ಬ ಒಳ್ಳೆಯ ಹುಡುಗನಾಗಿದ್ದ. ಅವನು ಮಿಕ್ಕ ಹುಡುಗರಂತೆ ಗಾಂಜಾ ಸೇದುವ, ಸಾರಾಯಿ ಕುಡಿಯುವ ಅಭ್ಯಾಸವಿಲ್ಲದವನು. ಅಂದ ಹಾಗೆ ಸಿನಿಮಾ ನಾಟಕಗಳಲ್ಲಿ ನಟಿಸುವುದು ತಪ್ಪೇ ಸರ್?'

ನನ್ನ ಅಭಿಪ್ರಾಯವನ್ನು ತಿಳಿದುಕೊಳ್ಳಲೆಂಬಂತೆ ಅಣ್ಣಾಚ್ಚಿ ನನ್ನ ಕಡೆ ನೋಡಿದನು.

ನಾನು ಹೇಳಿದೆ,

'ನೋಡೋಣ. ಯಾವುದಕ್ಕೂ ನೀವು ಅವನನ್ನು ಒಂದು ಸಲ ನಮ್ಮ ಮನೆಗೆ ಬರುವಂತೆ ಹೇಳಿ.'

ಅಣ್ಣಾಚ್ಚಿಗೆ ಬಲು ಸಂತೋಷವಾಯಿತು.

ಕುಮಾರನ ಬಗ್ಗೆಯೇ ಯೋಚಿಸುತ್ತಾ ನಾನು ನಡೆದೆ. ಅವನ ಪರಿಚಯವು ನಾನು ನೋಡಿದ್ದ ಸಿನಿಮಾದ ಕೆಲ ರಂಗಗಳಿಗಷ್ಟೆ ಸೀಮಿತವಾಗಿತ್ತು. ಇನ್ನೂ ಹೇಳಬೇಕೆಂದರೆ ರೆಸ್ಟೊರೆಂಟ್‌ನಲ್ಲಿ ಕಂಡದ್ದೂ ಸೇರಿಸಿಕೊಳ್ಳಬಹುದು ಅಷ್ಟೆ. ಆದರೆ ನಾನು ಅವನ ಬಳಿ ಮಾತನಾಡಿಯೂ ಇಲ್ಲ. ಆದರೂ ಸಹ ಅವನ ಮೇಲೆ ನನಗೆ ಒಂದು ಅನಿರ್ವಚನೀಯ ಮಮತೆ ತೋರಿತ್ತು.

ಬಹುಶಃ ಅಣ್ಣಾಚ್ಚಿಯು ಆವೇಶದಿಂದ ಆಡಿದ ಮಾತುಗಳು ಅದಕ್ಕೆ ಕಾರಣವಾಗಿರಬಹುದು.